ದಬ್ಬಾಳಿಕೆ ಮಾಡುವ ಆಡಳಿತಗಾರನ ಮುಂದೆ ನ್ಯಾಯವಾದ ಮಾತನ್ನು ಹೇಳುವುದು ಅತಿಶ್ರೇಷ್ಠ ಜಿಹಾದ್ ಆಗಿದೆ

ಅಬೂ ಸಈದ್ ಖುದ್ರಿ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರಿಂದ ವರದಿ. ಪ್ರವಾದಿಯವರು (ಅವರ
ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಹೇಳಿದರು: "ದಬ್ಬಾಳಿಕೆ ಮಾಡುವ ಆಡಳಿತಗಾರನ ಮುಂದೆ ನ್ಯಾಯವಾದ ಮಾತನ್ನು ಹೇಳುವುದು ಅತಿಶ್ರೇಷ್ಠ ಜಿಹಾದ್ ಆಗಿದೆ." [حسن لغيره] [رواه أبو داود والترمذي وابن ماجه وأحمد]

ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಇಲ್ಲಿ ವಿವರಿಸುವುದೇನೆಂದರೆ, ದಬ್ಬಾಳಿಕೆ ಮತ್ತು ಅನ್ಯಾಯವೆಸಗುವ ಸುಲ್ತಾನ ಅಥವಾ ಮುಖಂಡನ ಮುಂದೆ ನ್ಯಾಯವಾದ ಮತ್ತು ಸತ್ಯವಾದ ಮಾತನ್ನು ಹೇಳುವುದು ಜಿಹಾದ್ನ ಅತಿಶ್ರೇಷ್ಠ ಮತ್ತು ಅತಿ ಪ್ರಯೋಜನಕಾರಿ ವಿಧವಾಗಿದೆ. ಏಕೆಂದರೆ, ಇದು ಒಳಿತನ್ನು ಆದೇಶಿಸುವ ಮತ್ತು ಕೆಡುಕನ್ನು ತಡೆಯುವ ಕೆಲಸವಾಗಿದೆ. ನ್ಯಾಯವಾದ ಮಾತನ್ನು ಹೇಳುವುದು ಮಾತು, ಬರಹ, ಕ್ರಿಯೆ ಅಥವಾ ಪ್ರಯೋಜನವು ಲಭ್ಯವಾಗುವ ಮತ್ತು ಕೆಡುಕು ದೂರವಾಗುವ ಇತರ ಯಾವುದೇ ತರಹದಲ್ಲಾದರೂ ಸರಿ.

http://www.sunnah.global/hadeeth/kn/show/3045